ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2018–19 ದಿನಾಂಕ: 07–03–2019

## ಪತ್ರಿಕಾ ಆಮಂತ್ರಣ

1. ವಸತಿ ಇಲಾಖೆ ವತಿಯಿಂದ ಬೆಂಗಳೂರು ನಗರದ ವಸತಿರಹಿತ ಕುಟುಂಬಗಳಿಗೆ ವಸತಿ ಸೌಲಭ್ಯವನ್ನು ಕಲ್ಪಿಸುವ ಸಲುವಾಗಿ " ಮುಖ್ಯಮಂತ್ರಿಗಳ 1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"

ಚಾಲನೆ ಹಾಗೂ ಭೂಮಿಪೂಜೆ:

ಹೆಚ್. ಡಿ. ಕುಮಾರಸ್ವಾಮಿ,
ಮುಖ್ಯಮಂತ್ರಿಗಳು

**ಘನ ಉಪಸ್ಥಿತಿ:**

ಡಿ.ವಿ. ಸದಾನಂದ ಗೌಡ,
ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಹಾಗೂ ರಾಸಾಯನಿಕ ಮತ್ತು ರಸಗೊಬ್ಬರ, ಸಂಸದೀಯ ವ್ಯವಹಾರಗಳ ಸಚಿವರು.

ಶ್ರೀಮತಿ ನಿರ್ಮಲಾ ಸೀತಾರಾಮನ್,
ಕೇಂದ್ರ ರಕ್ಷಣಾ ಸಚಿವರು.

**2ನೇ ಹಂತದ ಆನ್‌ಲೈನ್ ಅರ್ಜಿ ಆಹ್ವಾನದ ಉದ್ಘಾಟನೆ:**

ಡಾ ಜಿ. ಪರಮೇಶ್ವರ್,
ಉಪ ಮುಖ್ಯಮಂತ್ರಿಗಳು.

ಎನ್. ನಾಗರಾಜು, ಎಂ.ಟಿ.ಬಿ.
ವಸತಿ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ ಉಸ್ತುವಾರಿ ಸಚಿವರು.

ಅಧ್ಯಕ್ಷತೆ:

ಕೃಷ್ಣ ಬೈರೇಗೌಡ,

ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು.

ದಿನಾಂಕ: 8-03-2019 ಶುಕ್ರವಾರ ಸಮಯ : ಮಧ್ಯಾಹ್ನ 12.30 ಗಂಟೆಗೆ.

ಸ್ಥಳ: ಸರ್ವೆ ನಂ 59, ಕುದುರೆಗೆರೆ ಗ್ರಾಮ, ಬೆಟ್ಟಹಲಸೂರು ಗ್ರಾಮ ಪಂಚಾಯತಿ, ಬ್ಯಾಟರಾಯನಪುರ, ಬೆಂಗಳೂರು ಉತ್ತರ.

**ಸೂಚನೆ**: ಈ ಕಾರ್ಯಕ್ರಮಕ್ಕೆ ಮಾಧ್ಯಮ ಪ್ರತಿನಿಧಿಗಳನ್ನು ಕರೆದೊಯ್ಯಲು ವಾಹನ ವ್ಯವಸ್ಥೆ ಮಾಡಲಾಗಿದ್ದು, ವಾಹನವು ಅಂದು ಬೆಳಿಗ್ಗೆ 11.00 ಗಂಟೆಗೆ ವಾರ್ತಾಸೌಧದ ಅವರಣದಿಂದ ನಿಗದಿತ ಸ್ಥಳದತ್ತ ತೆರಳಲಿದೆ.

ಸಂಪರ್ಕ: ರವಿಕುಮಾರ್, ಸಹಾಯಕ ಪ್ರಧಾನ ವ್ಯವಸ್ಥಾಪಕರು
ಮೊಬೈಲ್ ನಂ. 9448287511
7892373522

2. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ:
ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಮತ್ತು ಇತರೆ ಪ್ರಶಸ್ತಿಗಳ ಪ್ರದಾನ ಸಮಾರಂಭ:
**ಮಳಿಗೆಗಳ ಉದ್ಘಾಟನೆ, ಪ್ರಶಸ್ತಿ ಪ್ರದಾನ:**

ಹೆಚ್. ಡಿ. ಕುಮಾರಸ್ವಾಮಿ,
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಶ್ರೀಮತಿ ಯಶೋಧರಮ್ಮ ದಾಸಪ್ಪನವರ ಹೆಸರಿನಲ್ಲಿ ಪ್ರಶಸ್ತಿ ಪ್ರದಾನ:
ಡಾ ಜಿ. ಪರಮೇಶ್ವರ್,
ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

**ಘನ ಉಪಸ್ಥಿತಿ:**
ಡಾ. ಜಯಮಾಲ ರಾಮಚಂದ್ರ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು,
**ಮುಖ್ಯ ಅತಿಥಿಗಳು:**
ಡಿ.ವಿ. ಸದಾನಂದ ಗೌಡ,

ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಹಾಗೂ ರಾಸಾಯನಿಕ ಮತ್ತು ರಸಗೊಬ್ಬರ, ಸಂಸದೀಯ ವ್ಯವಹಾರಗಳ ಸಚಿವರು.

ಶ್ರೀಮತಿ ನಿರ್ಮಲಾ ಸೀತಾರಾಮನ್,
ಕೇಂದ್ರ ರಕ್ಷಣಾ ಸಚಿವರು.
ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ,
ಮಹಾಪೌರರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
**ಅಧ್ಯಕ್ಷತೆ:**
ಉದಯ ಬಿ. ಗರುಡಾಚಾರ್,
ವಿಧಾನಸಭಾ ಸದಸ್ಯರು
ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ
ದಿನಾಂಕ: 8–03–2019 ಶುಕ್ರವಾರ ಸಮಯ : ಬೆಳಿಗ್ಗೆ: 11.00 ಗಂಟೆಗೆ.
ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಬೆಂಗಳೂರು.

3. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಜಾನಪದ ಜಾತ್ರೆ,
   ಚಾಲನೆ:
   ಎಂ. ಎ ಗೋಪಾಲಸ್ವಾಮಿ,
   ಸಂಸದೀಯ ಕಾರ್ಯದರ್ಶಿ, ಜಲಸಂಪನ್ಮೂಲ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ

   ದಿನಾಂಕ: 08–03–2019 ಶುಕ್ರವಾರ ಸಮಯ : ಸಂಜೆ 5–30 ಗಂಟೆಗೆ
   ಸ್ಥಳ: ಬಯಲು ರಂಗಮಂದಿರ ಕಲಾಗ್ರಾಮ ಆವರಣ, ಮಲ್ಲತ್ತಹಳ್ಳಿ, ಬೆಂಗಳೂರು

## ಪತ್ರಿಕಾ ಪ್ರಕಟಣೆ

**ನವದೆಹಲಿಯ ಕರ್ನಾಟಕ ಭವನ ಪುನರ್ ನಿರ್ಮಾಣಕ್ಕೆ ಮಾರ್ಚ್ 8 ರಂದು ಶಂಕುಸ್ಥಾಪನೆ**

**ಬೆಂಗಳೂರು, ಮಾರ್ಚ್ 7 (ಕರ್ನಾಟಕ ವಾರ್ತೆ)**

**ನವದೆಹಲಿಯ ಚಾಣಕ್ಯಪುರಿಯ ಕೌಟಿಲ್ಯ ಮಾರ್ಗ್‌ನಲ್ಲಿರುವ ಕರ್ನಾಟಕ ಭವನ –1 ಕಾವೇರಿ ಕಟ್ಟಡದ ಪುನರ್ ನಿರ್ಮಾಣಕ್ಕೆ ಮುಖ್ಯಮಂತ್ರಿ ಹೆಚ್. ಡಿ. ಕುಮಾರಸ್ವಾಮಿ ಅವರು ಮಾರ್ಚ್ 8 ರಂದು ಸಂಜೆ 4–30 ಗಂಟೆಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.**

**ಉಪ ಮುಖ್ಯಮಂತ್ರಿ ಡಾ: ಜಿ. ಪರಮೇಶ್ವರ್ ಅವರು ಅಧ್ಯಕ್ಷತೆ ವಹಿಸಲಿರುವ ಈ ಸಮಾರಂಭದಲ್ಲಿ ಹಾಸನ ಲೋಕಸಭಾ ಸದಸ್ಯರೂ ಆದ ಮಾಜಿ ಪ್ರಧಾನಮಂತ್ರಿ ಹೆಚ್. ಡಿ. ದೇವೇಗೌಡ, ಕೇಂದ್ರ ರಕ್ಷಣಾ ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್, ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಹಾಗೂ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಡಿ. ವಿ. ಸದಾನಂದಗೌಡ, ಕೇಂದ್ರ ಕೌಶಲ್ಯಾಭಿವೃದ್ಧಿ ಖಾತೆಯ ರಾಜ್ಯ ಸಚಿವ ಅನಂತ್‌ಕುಮಾರ್ ಹೆಗಡೆ, ಕೇಂದ್ರ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯೀಕರಣ ಖಾತೆಯ ರಾಜ್ಯ ಸಚಿವ ರಮೇಶ್ ಸಿ. ಜಿಗಜಿಣಗಿ, ಲೋಕೋಪಯೋಗ ಸಚಿವ ಹೆಚ್.ಡಿ. ರೇವಣ್ಣ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

# ಬಾಳೆ ಬೆಳೆ ನಾಟಿ ಮಾಡುವ ವಿಧಾನ

ಬೆಂಗಳೂರು, ಮಾರ್ಚ್ 7 (ಕರ್ನಾಟಕ ವಾರ್ತೆ)

ಬಾಳೆಯನ್ನು ಕೆಂಪುಗೋಡು ಮಣ್ಣಿನಿಂದ ಹಿಡಿದು ಕಪ್ಪು ಮಣ್ಣಿನಲ್ಲೂ ಬೆಳೆಯಬಹುದಾಗಿದ್ದು, ನೀರು ಚೆನ್ನಾಗಿ ಬಸಿದು ಹೋಗುವಂತಿರಬೇಕು.

ಬಾಳೆಯು ಹೆಚ್ಚು ನೀರು ಬೇಡುವ ಬೆಳೆಯಾಗಿದ್ದರೂ ಸಹ 24 ಗಂಟೆಗಳಿಗೂ ಹೆಚ್ಚು ಕಾಲ ಭೂಮಿಯಲ್ಲಿ ನೀರು ನಿಲ್ಲಬಾರದು.

ಚಳಿಗಾಲವನ್ನು ಹೊರತುಪಡಿಸಿ ಎಲ್ಲಾ ಕಾಲದಲ್ಲೂ ನಾಟಿ ಮಾಡಬಹುದಾಗಿರುತ್ತದೆ. ಮಾರುಕಟ್ಟೆಯ ಬೇಡಿಕೆಗನುಸಾರವಾಗಿ ನಾಟಿ ಕಾಲವನ್ನು ನಿರ್ಧರಿಸುವುದು ಲಾಭಕರ.

ಸ್ಥಳೀಯ ಮಾರುಕಟ್ಟೆಗೆ ಸರಬರಾಜು ಮಾಡುವವರು ಸ್ಥಳೀಯ ತಳಿಗಳನ್ನೂ ರಫ್ತು ಮಾಡಲು ಇಚ್ಛಿಸುವರು ಗ್ರಾಂಡ್ ನೈನ್ (ಜಿ–9) ತಳಿಯನ್ನು ಬೆಳೆಯಬಹುದು.

ನಾಟಿಗೆ ಬಳಸುವ ಕಂದುಗಳನ್ನು ಕೀಟ ಮತ್ತು ರೋಗರಹಿತ ತೋಟಗಳಿಂದ ಪಡೆಯುವುದರಿಂದ ಗೆಡ್ಡೆ ಮೂಲಕ ಪಸರಿಸುವ/ ಹರಡುವ ಕೀಟ ಮತ್ತು ರೋಗಗಳನ್ನು ತಡೆಗಟ್ಟಬಹದು.

ಬಾಳೆ ನಾಟಿ ಮಾಡಲು ಬಳಸುವ ಕಂದುಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಮೊದಲನೆಯದು ಕತ್ತಿ ಕಂದು, ಈ ಕಂದುಗಳಲ್ಲಿ ಎಲೆಗಳು ಕತ್ತಿ ಆಕಾರದಲ್ಲಿ ಉದ್ದಕ್ಕೆ ಇರುತ್ತವೆ. ಎರಡನೆಯದು ನೀರು ಕಂದು, ಇದರಲ್ಲಿ ಪ್ರಾರಂಭದಲ್ಲಿ

ಎಲೆಗಳು ಅಗಲವಾಗಿ ಹೊಮ್ಮುತ್ತವೆ. ಕತ್ತಿ ಕಂದುಗಳು ಉತ್ತಮ ದರ್ಜೆಯ ಗೊನೆಗಳನ್ನು ಬಿಡಬಲ್ಲವು. ನೀರು ಕಂದುಗಳನ್ನು ಬಳಸಬಾರದು. ಇವುಗಳಿಂದ ಬೆಲೆ ತಡವಾಗಿ ಬರುವುದಲಲದೆ ಉತ್ತಮ ದರ್ಜೆಯ ಗೊನೆಗಳು ಸಹ ಬರುವುದಿಲ್ಲ. ಚೆನ್ನಾಗಿರುವ ಉತ್ತಮ ಗುಣಮಟ್ಟದ ರೋಗರಹಿತ ಅಂಗಾಂಶ ಸಸಿಗಳನ್ನು ಸಹ ಉಪಯೋಗಿಸಬಹುದಾಗಿರುತ್ತದೆ.

ಬಾಳೆಯು ಹೆಚ್ಚಿನ ಪ್ರಮಾಣದಲ್ಲಿ ನೀರು ಬೇಡುವ ಬೆಳೆಯಾಗಿರುವುದರಿಂದ ಮಣ್ಣಿನಲ್ಲಿ ಹೆಚ್ಚು ತೇವಾಂಶ ಹಿಡಿದಿಟ್ಟುಕೊಳ್ಳಲು, ಹೆಚ್ಚಿನ ಪ್ರಮಾಣದಲ್ಲಿ ಕೊಟ್ಟಿಗೆ ಗೊಬ್ಬರವನ್ನು ಬಳಸಬೇಕು.

ರಾಸಾಯನಿಕ ಗೊಬ್ಬರಗಳನ್ನು ಶಿಫಾರಸ್ಸು ಮಾಡಿದ ಪ್ರಮಾಣ ಮತ್ತು ಕಂತುಗಳಲ್ಲಿ ಕೊಟ್ಟು ಮುಗಿಸಬೇಕು. ಕಂದು ಬಳಸಿ ಬೆಳೆದ ಬೆಳೆಯಲ್ಲಿ ಹೂವು ಗೊಂಚಲು ಪ್ರಾರಂಭವಾದ ನಂತರ ರಾಸಾಯನಿಕ ಗೊಬ್ಬರಗಳನ್ನು ನೀಡುವುದರಿಂದ ಮರಿ ಕಂದುಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುವ ಸಂಭವವಿದ್ದು, ಇಳುವರಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಯಾವುದೇ ಪರಿಣಾಮವಿರುವುದಿಲ್ಲ.

ತಾಯಿ ಗಿಡ ಹೂವು ಬಿಡುವ ತನಕ ಪಕ್ಕದಲ್ಲಿ ಬರುವ ಕಂದುಗಳನ್ನು ತೆಗೆಯುತ್ತಿರಬೇಕು. ಕೂಳೆ ಬೆಳೆ ಬೆಳೆಯಲು ಒಂದು ಕತ್ತಿ ಕಂದನ್ನು ಮುಖ್ಯ ಬಾಳೆ ಗಿಡವು ಗೊನೆ ಬಿಡುವಾಗ ಬಿಡಬೇಕು ಹಾಗೂ ಮಾಗಿದ ಗೊನೆ ಕೊಯ್ಲಾದ ನಂತರ ಇನ್ನೊಂದು ಕತ್ತಿ ಕಂದನ್ನು ಬೆಳೆಯಲು ಬಿಡಬೇಕು. ಯಾವುದೇ ಹಂತದಲ್ಲಿ ಮೂರಕ್ಕಿಂತ ಹೆಚ್ಚು ಗಿಡಗಳು ಇರಬಾರದು.

ಗೊನೆ ಬಂದ ನಂತರ ಬಾಳೆ ಗಿಡ ಗಾಳಿಯ ಹೊಡೆತದಿಂದ ಮತ್ತು ಗೊನೆಯ ಭಾರದಿಂದ ಕೆಳಗೆ ಬೀಳದಂತೆ ಪ್ರತಿ ಗಿಡಕ್ಕೂ ಕೋಲನ್ನು ಕಟ್ಟಿ ಆಸರೆ ಒದಗಿಸುವುದು.

ಗೊನೆಯ ತುದಿಯಲ್ಲಿರುವ ಗಂಡು ಹೂವು ಭಾಗವನ್ನು ಕೊನೆಯ ಕಾಯಿಗಳು ಕಚ್ಚಿದಾಗ ಕತ್ತರಿಸಿ ಹಾಕಬೇಕು.

ಅಧಿಕ ಇಳುವರಿಗಾಗಿ ಬಾಳೆ ಸ್ಪೆಷಲ್‌ನ್ನು ಪ್ರತಿ ಲೀಟರ್ ನೀರಿಗೆ 5 ಗ್ರಾಂ ನಂತರ 5 ಹಂತಗಳಲ್ಲಿ ಗಿಡನೆಟ್ಟ 5 ತಿಂಗಳ ನಂತರ ಸಿಂಪಡಿಸಬೇಕು.

ಗೊನೆಯನ್ನು ಕೊಯ್ಲು ಮಾಡಿದ ನಂತರ ತಾಯಿ ಗಿಡವನ್ನು ಹಂತ ಹಂತವಾಗಿ 15–20 ದಿನಗಳ ಅಂತರದಲ್ಲಿ ಕತ್ತರಿಸಿ ಹಾಕಬೇಕು. ಇದರಿಂದಾಗಿ ಆ ಗಿಡದಲ್ಲಿನ ಉಳಿಕೆ ಪೋಷಕಾಂಶಗಳು ಬೆಳೆಯುತ್ತಿರುವ ಮರಿಗಿಡಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಾಗುತ್ತವೆ.

ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲೆಗಳ ಹಾರ್ಟಿಕ್ಲಿನಿಕ್ ಅಥವಾ ತಾಲ್ಲೂಕಿನ ತೋಟಗಾರಿಕೆ ಅಧಿಕಾರಿಗಳು ಸಂಪರ್ಕಿಸಬಹುದಾಗಿದೆ ಎಂದು ತೋಟಗಾರಿಕಾ ಇಲಾಖೆ ಪ್ರಕಟಣೆ ತಿಳಿಸಿದೆ.

# Adopts to follow the General Holiday and Restricted Holidays

Bengaluru, March 7th (Karnataka Information)

Karnataka State Consumer Disputes Redressal Commission, Bengaluru, adopts to follow the General Holidays and Restricted Holidays specified by the Governmentof Karnataka to be observed by all the Offices of the Government of Karnataka for the year 2019.

Except the days fixed for the hearing of urgent matters, there will be no regular sittings during the period mentioned below:

Summer Vacation – From Monday the 29th April 2019 to Saturday, the 25th May 2019 (bdi)

Dasara Vacation – From Monday the 30th Sept 2019 to Saturday the 5th Oct. 2019. (bdi)

Winter Vacation – from Monday the 23rd Dec. 2019 to Tuesday the 31st Dec. 2019 (bdi)

The Office of the Karnataka State Consumer Disputes Redressal Commission will be working from 10.00 A.M. to 5.30 P.M. on all working days of the State Government and the non-sitting days as mentioned above. All the District Consumer Disputes Redressal Forums in the State of Karnataka will work on all working days of the State Government says an official press release.

## ಸಚಿವರ ಪ್ರವಾಸ

ಬೆಂಗಳೂರು, ಮಾರ್ಚ್ 7 (ಕರ್ನಾಟಕ ವಾರ್ತೆ)

ಕೃಷಿ ಸಚಿವ ಎನ್. ಹೆಚ್. ಶಿವಶಂಕರ ರೆಡ್ಡಿ ಅವರು ಮಾರ್ಚ್ 8 ಮತ್ತು 9 ರಂದು ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು, ವಿವಿಧ ಸರ್ಕಾರಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು, ಮಾರ್ಚ್ 9 ರಂದು ಬೆಂಗಳೂರಿಗೆ ಹಿಂತಿರುಗಲಿದ್ದಾರೆ.

## ಮಾರ್ಚ್ 8 ರಂದು "ಉದ್ಯೋಗ ಮೇಳ"

ಬೆಂಗಳೂರು, ಮಾರ್ಚ್ 7 (ಕರ್ನಾಟಕ ವಾರ್ತೆ)

**ರಾಷ್ಟ್ರೀಯ ವೃತ್ತಿ ಸೇವಾ ಯೋಜನೆ (NCSP) ಅಡಿಯಲ್ಲಿ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಗಳು, ಏಪ್ಯಾಟಿಕ್ ಕಟ್ಟಡ, ಎರಡನೇ ಮಹಡಿ, ಕೆಂಪೇಗೌಡ ರಸ್ತೆ, ಬೆಂಗಳೂರು – 560 009 ಹಾಗೂ ಖಾಸಗಿ ನಿಯೋಜಕರುಗಳ ಸಂಯುಕ್ತ ಆಶ್ರಯದಲ್ಲಿ ನಿರುದ್ಯೋಗಿ ಯುವಕ/ಯುವತಿಯರಿಗೆ ನೇರ ಸಂದರ್ಶನಕ್ಕೆ ಅನುಕೂಲವಾಗುವಂತೆ ಮಾರ್ಚ್ 8 ರಂದು ಶುಕ್ರವಾರ ಪೂರ್ವಾಹ್ನ 10.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಬಿ.ಟಿ.ಎಲ್. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಮ್ಯಾನೇಜ್‌ಮೆಂಟ್ # 259/3, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಹೊಸೂರು ರಸ್ತೆ, ಬೆಂಗಳೂರು – 560 099 ಇಲ್ಲಿ "ಉದ್ಯೋಗ ಮೇಳ' ವನ್ನು ಹಮ್ಮಿಕೊಳ್ಳಲಾಗಿದೆ.**

**ಈ ಉದ್ಯೋಗ ಮೇಳದಲ್ಲಿ ಖಾಸಗಿ ವಲಯದ 50 ಕ್ಕೂ ಹೆಚ್ಚು ಹೆಸರಾಂತ ಸಂಸ್ಥೆಗಳು ಭಾಗವಹಿಸುತ್ತಿದ್ದು, ವಿವಿಧ ತಾಂತ್ರಿಕ ಹಾಗೂ ತಾಂತ್ರಿಕೇತರ ಹುದ್ದೆಗಳಿಗೆ ಸ್ಥಳದಲ್ಲೇ ನೇರವಾಗಿ ಆಯ್ಕೆ ಮಾಡಲಿದ್ದಾರೆ.**

**ಅಕ್ಷರಸ್ಥರು, ಅರ್ಧದಲ್ಲಿಯೇ ಶಾಲೆ ಬಿಟ್ಟವರು ಹಾಗೂ ಎಸ್.ಎಸ್.ಎಲ್.ಸಿ. ಫೇಲ್/ ಪಾಸ್, ಪಿ.ಯು.ಸಿ, ಐ.ಟಿ.ಐ. ಡಿಪ್ಲೋಮ (ಎಲ್ಲಾ ಟ್ರೇಡ್‌ಗಳು), ಪದವೀಧರರು ಹಾಗೂ ಸ್ನಾತಕೋತ್ತರ ಪದವಿ ಹೊಂದಿದವರಿಗೆ ಉದ್ಯೋಗ ಅವಕಾಶಗಳು ಲಭ್ಯವಿದೆ. ಉದ್ಯೋಗಕಾಂಕ್ಷಿಗಳು ತಮ್ಮ ವೈಯಕ್ತಿಕ (ಬಯೋಡಾಟಾ) ವಿವರಗಳೊಂದಿಗೆ "ಉದ್ಯೋಗ**

ಮೇಳ' ದಲ್ಲಿ ಭಾಗವಹಿಸಿ ಉದ್ಯೋಗ ದೊರೆಯುವ ಸದಾವಕಾಶವನ್ನು ಸದುಪಯೋಗಪಡಿಸಿಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗಾಗಿ ಈ ಕೆಳಗಿನ ದೂರವಾಣಿ ಸಂಖ್ಯೆ **9036100054/ 9036100064 /9036100065 / 9036100069** ಮೂಲಕ ಸಂಪರ್ಕಿಸಬಹುದಾಗಿದೆ

ಸೂಚನೆಗಳು:

ಅಭ್ಯರ್ಥಿಗಳು ಆಧಾರ ಕಾರ್ಡ್ ಮತ್ತು ಕನಿಷ್ಠ 10 ಬಯೋಡೇಟಾಗಳೊಂದಿಗೆ ಮೇಳಕ್ಕೆ ಹಾಜರಾಗುವುದು.

ಉದ್ಯೋಗ ಮೇಳದಲ್ಲಿ ಭಾಗವಹಿಸಲು ಯಾವುದೇ ಫೀ/ಶುಲ್ಕ ಇರುವುದಿಲ್ಲ. ಸಂಪೂರ್ಣ ಉಚಿತವಾಗಿರುತ್ತದೆ.

ಎನ್.ಸಿ.ಎಸ್. ಪೋರ್ಟಲ್ **(www.ncs.gov.in)** ನಲ್ಲಿ ನೊಂದಾಯಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

## Foundation stone laying of phase-I Revival and Refurbishment of T.G.Halli water supply scheme.

In 1896 drinking water was brought to Bangalore City from Hesaraghatta Reservoir through pipelines. The water was treated in CJF Malleshwaram and then it will be supplied to North part of the city. As city developed, the demand for water was increased so that Chamarajasagar Dam was constructed across Arkavati. Construction was stated in 1930 and completed 1933.

The water was treated step by step and distributed around 135 MLD water to North and South of the Bangalore City. Then Thippagondanahalli Reservoir was constructed under the supervision of Sir M.Vishveshwaraiah .The Height of the Reservoir 100 feet and length is 1480 feet is has the storage capacity of 3.23 TMC water . In 1930 the Reservoir of Constructed with the cost of around Rs. 21.80 Lakhs.

Up to 1986 135 MLD water was supplied to Bangalore city. After that, as the flow of water to the catchment area of the reservoir decreases, the quantity of water supply to the Bangalore City was also decreased. At present there is no water supply from this reservoir to

Bangalore City. Now it has been planed to undertake the revival project of the reservoir to store, treat and supply the water effectively to Bangalore city.

In the year 1895, Bengaluru city starts getting water from Hesaraghatta Reservoir. During 1925, the Hesaraghatta Reservoir starts dried up due to insufficient yield from the catchment area and increase in demand to meet the water requirement. In this scenario, in the year 1930 Mysore Government had started project to supply the water by constructing the dam across the confluence point of Arkavathi&Kumadavathi River at Tippagondanahalli. This project headed by Sir M.Vishweshwaraya and completed at 1933. The project had a scope for the construction of Dam at TGHalli, after filtration, lifting the water by pumping in 2 stages form TGHalli to Tavarkere, then to CJF Storage Tank at Malleshwaram.

In different phases, the water supply scheme has been augmented to 135 Million litres per day. Due to the rapid developments in the surrounding of Bengaluru and non-agricultural activities in the Tippagondanahalli catchment area, starts depleting in inflow and deteriorated the quality of the water. To meet the citizen's water requirement, the BWSSB had planned to get water from Kaveri in different stages. These leads to decreasing the dependency on Tippagondanahalli reservoir. Since 2012, the water supply has been stopped due to poor quality of the drinking water.

Tippagondanahalli reservoir having storage capacity 3345MCFT(3.34TMC). At present the reservoir water is not fit for potable, hence there is necessity in Rejuvenation of the Tippagondanahalli water supply scheme. Under Yettinahole water supply scheme BWSSB will also be receiving 0.8TMC of water to Hesaraghatta reservoir and 1.7TMC of water to Tippagondanhalli reservoir and totally 2.5TMC of water will be available to Bangalore city for drinking purpose. The State Government's eminent Yettinahole project works are taking up in speedy manner by VisveshvarayaJala Nigam Ltd for supply the water to Tippagondanahalli reservoir in Phase-1. In order to use of the Yettinahole

water, there is a necessity of Refurbishment of Tippagondanahalli& Hesaraghatta Reservoir and also revival of water supply schemes. In this regard, during 2018 the Detailed Project Report has been prepared to an amount Rs.406Crores and submitted to Government of Karnataka for approval. Government of Karnataka has accorded approval to take up the Tippagondanahalli refurbishment works in phase-1 at the cost of Rs.285.95Crores in the funding pattern as 50% loan under Megacity Revolving Funds(MCRF) form KUIDFC and 25% State Government Grants remaining 25% will be borne by BWSSB.

As per government directions, the tender has been floated in 2018 by adopting KTPP Act to take up the following works at the estimate cost of Rs.260.33Crores.

1. Construction of 20Million Liters per Day(MLD) Sewage Treatment Plant(STP) in the upstream of Tippagondanahalli reservoir. By establishing the STP, the effluents flowing along Arkavathiriver can be treated and also avoids entry of sewage mix with yettinahole fresh water.
2. Construction of 110Mililion Liters per Day(MLD) Water Treatment Plant by demolishing the existing 3 Treatment Plants out of 4 WTP's by adopting latest technology Ozonisation.
3. The laying of 22KM's Mild Steel(MS) pipeline along with refurbishment works of Tippagondanahalli and Tavarekere Pump houses.
4. Dredging works at Tippagondanahalli Reservoir with Bio-remediation.

The tender works awarded to M/s Megha Engineering & Infrastructure Ltd., after getting approval from Government of Karnataka. Today our Hon'ble Chief Minister, GOK will be laying the foundation stone for the Tippagondanahalli Rejuvenation works.

The aforesaid works having Operation & Maintenance (O&M) for period of 10years. The consultancy services has been awarded to M/s Tata Consultant Engineers Ltd., for the duration of 30months and targeted to complete the project by 2021.

This is an esteemed Government project for supplying the water to fast growing Bengaluru city, especially western and north-west parts of Bengaluru city.

By implementing the prestigious project, can be quench the thirsty of Bengaluru citizens. The beneficiaries' areasareDasarahalli, Herohalli, Yeshwanthapua, Vishveshvariah Layout and Vijayanagara.

# ತಿಪ್ಪಗೊಂಡನಹಳ್ಳಿ ಜಲಾಶಯವನ್ನು ಮೊದಲನೇ ಹಂತದಲ್ಲಿ ಪುನಃಶ್ಚೇತನಗೊಳಿಸುವ ಕಾಮಗಾರಿಯ ಶಂಕುಸ್ಥಾಪನಾ ಸಮಾರಂಭ

ಬೆಂಗಳೂರು ನೀರು ಸರಬರಾಜು & ಒಳಚರಂಡಿ ಮಂಡಳಿಯು ತಿಪ್ಪಗೊಂಡನಹಳ್ಳಿ ಜಲಾಶಯವನ್ನು ಮೊದಲನೇ ಹಂತದಲ್ಲಿ ಪುನಃಶ್ಚೇತನಗೊಳಿಸುವ ಕಾಮಗಾರಿಯ ಶಂಕುಸ್ಥಾಪನಾ ಸಮಾರಂಭವನ್ನು **ಬುಧವಾರ ತಿಪ್ಪಗೊಂಡನಹಳ್ಳಿ ಜಲಾಶಯದ ಆವರಣ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು,** ಇಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ನಾಡಗೀತೆಯೊಂದಿಗೆ ಪ್ರಾರಂಭಿಸಲಾಯಿತು. ನಂತರ ಶ್ರೀ ಮಹೇಂದ್ರ ಜೈನ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಇವರು ಗಣ್ಯರನ್ನು ಸ್ವಾಗತಿಸಿ, ಸದರಿ ಸಮಾರಂಭದ ಪ್ರಾಮುಖ್ಯತೆಯನ್ನು ಪ್ರಾಸ್ತಾವಿಕ ನುಡಿಯ ಮೂಲಕ ವಿವರಿಸಿದರು.ನಂತರ ವೇದಿಕೆ ಮೇಲಿರುವ ಗಣ್ಯರು ಜ್ಯೋತಿ ಬೆಳಗುವುದರ ಮೂಲಕ ಸಮಾರಂಭವನ್ನು ಉದ್ಘಾಟಿಸಿದರು.

ಸನ್ಮಾನ್ಯ ಉಪ ಮುಖ್ಯಮಂತ್ರಿಗಳಾದ **ಡಾ|| ಜಿ.ಪರಮೇಶ್ವರ್** ರವರು ಗುಂಡಿ ಒತ್ತುವುದರ ಮೂಲಕ ಶಂಕುಸ್ಥಾಪನಾ ಸಮಾರಂಭದ ಶಿಲಾನ್ಯಾಸ ನೆರವೇರಿಸಿದರು.

ಮುಂದುವರೆದಂತೆ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಎಸ್.ಟಿ.ಸೋಮಶೇಖರ್, ಮಾನ್ಯ ಅಧ್ಯಕ್ಷರು, ಬೆಂಗಳೂರ ಅಭಿವೃದ್ಧಿ ಪ್ರಾಧಿಕಾರ, ಇವರು ಈ ಯೋಜನೆ ಕಾರ್ಯಗತಗೊಳ್ಳುತ್ತಿರುವುದರಿಂದ ಎಷ್ಟೋ ವರ್ಷಗಳ ಬೇಡಿಕೆ ಈಡೇರಿದಂತಾಗುತ್ತಿದೆ ಹಾಗೂ ಈ ಶಂಕುಸ್ಥಾಪನಾ ಸಮಾರಂಭವನ್ನು ಸನ್ಮಾನ್ಯ **ಉಪ ಮುಖ್ಯಮಂತ್ರಿಗಳಾದ ಡಾ|| ಜಿ.ಪರಮೇಶ್ವರ್** ರವರು ನೆರವೇರಿಸಿರುವುದು ಬಹಳ ಸಂತೋಷದಾಯಕವಾಗಿದೆ ಹಾಗೂ ಬೆಂಗಳೂರಿನ ಅಭಿವೃದ್ಧಿಗೆ ಮಾನ್ಯ ಉಪಮುಖ್ಯಮಂತ್ರಿಗಳು ವಿಶೇಷ ಕಾಳಜಿಯನ್ನು ವಹಿಸಿರುವುದು ಶ್ಲಾಘನೀಯ ಎಂದು ತಿಳಿಸಿದರು. ಮತ್ತು ಬೆಂಗಳೂರು ಜಲಮಂಡಳಿಯ ಅಧ್ಯಕ್ಷರಾದ ಶ್ರೀ ತುಷಾರ್ ಗಿರಿ ನಾಥ್ ರವರು ಹಾಗೂ ಅಧಿಕಾರಿ/ನೌಕರರು ತುಂಬಾ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ತಿಳಿಸಿದರು.

ತದನಂತರ ಸಮಾರಂಭದ ಸಹ ಅಧ್ಯಕ್ಷತೆಯನ್ನು ವಹಿಸಿದ್ದ ಮಾಗಡಿ ವಿಧಾನ ಸಭಾ ಸದಸ್ಯರಾದ ಎ.ಮಂಜುನಾಥ್ ರವರು ತಿಪ್ಪಗೊಂಡನಹಳ್ಳಿ ಜಲಾಶಯವನ್ನು ಪುನಃಶ್ಚೇತನಗೊಳಿಸುತ್ತಿರುವುದು ತುಂಬಾ ಸಂತೋಷದಾಯಕವಾಗಿದೆ ಹಾಗೂ ಈ ಕಾಮಗಾರಿಯಿಂದ ಕುಡಿಯುವ ನೀರಿನ ಬವಣೆ ತಗ್ಗಿಸಬಹುದಾಗಿದೆ ಎಂದು ತಿಳಿಸಿದರು.

ಶ್ರೀ ಡಿ.ಕೆ.ಸುರೇಶ್, ಮಾನ್ಯ ಲೋಕಸಭಾ ಸದಸ್ಯರು, ತಿಪ್ಪಗೊಂಡನಹಳ್ಳಿ ಜಲಾಶಯವನ್ನು ಪುನಃಶ್ಚೇತನಗೊಳಿಸುವ ಕಾಮಗಾರಿ ಹಾಗೂ 110 ಹಳ್ಳಿಗೆ ಕುಡಿಯುವ ನೀರು ಸರಬರಾಜು ಯೋಜನೆಯ ಸಫಲತೆಗಾಗಿ ಬೆಂಗಳೂರು ಜಲಮಂಡಳಿಯ ಅಧ್ಯಕ್ಷರಾದ ಶ್ರೀ ತುಷಾರ್ ಗಿರಿ ನಾಥ್ ರವರು ಹಾಗೂ ಅಧಿಕಾರಿ/ನೌಕರರು ತುಂಬಾ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

ಶ್ರೀ ಹೆಚ್.ಎಂ.ರೇವಣ್ಣ, ವಿಧಾನ ಪರಿಷತ್ ಸದಸ್ಯರು, ತಿಪ್ಪಗೊಂಡನಹಳ್ಳಿ ಜಲಾಶಯವನ್ನು ಪುನಃಶ್ಚೇತನಗೊಳಿಸುತ್ತಿರುವುದು ತುಂಬಾ ಸಂತೋಷದಾಯಕವಾದ ವಿಚಾರ ಹಾಗೂ ಸನ್ಮಾನ್ಯ ಉಪ ಮುಖ್ಯಮಂತ್ರಿಗಳಾದ ಡಾ|| ಜಿ.ಪರಮೇಶ್ವರ್ ರವರು ಬೆಂಗಳೂರಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಹಾಗೂ ತಿಪ್ಪಗೊಂಡನಹಳ್ಳಿ ಜಲಾಶಯವನ್ನು ಪುನಃಶ್ಚೇತನಗೊಳಿಸುವುದರಿಂದ ನಾಗರೀಕರಿಗೆ ತುಂಬಾ ಅನುಕೂಲವಾಗುತ್ತದೆ ಎಂಬುದು ತುಂಬಾ ಸಂತೋಷಕರ ವಿಷಯ ಎಂದು ತಿಳಿಸಿದರು.

ನಂತರ ಸನ್ಮಾನ್ಯ ಉಪ ಮುಖ್ಯಮಂತ್ರಿಗಳಾದ ಡಾ|| ಜಿ.ಪರಮೇಶ್ವರ್ ರವರು ತಮ್ಮ ಉದ್ಘಾಟನಾ ಭಾಷಣದಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯವನ್ನು ಪುನಃಶ್ಚೇತನಗೊಳಿಸುವ ಕಾಮಗಾರಿಯ ಶಂಕುಸ್ಥಾಪನಾ ಸಮಾರಂಭವನ್ನು ನೆರವೇರಿಸಿರುವುದು ತುಂಬಾ ದಿನಗಳ ಆಶಯ ಈಡೇರಿದಂತಾಗಿದೆ. ಇಂದು ಬೆಳಗ್ಗೆ ಸುಮಾರು 11.30 ಗಂಟೆಯಿಂದ ಬೆಂಗಳೂರು ಜಲಮಂಡಳಿಯ ಶಂಕುಸ್ಥಾಪನೆ, ವಿವಿಧ ಕಾಮಗಾರಿಗಳ ಚಾಲನೆ ಒಳಗೊಂಡಂತೆ ಸುಮಾರು ಆರು ಕಾರ್ಯಕ್ರಮಗಳನ್ನು ಉದ್ಘಾಟಿಸಿರುವುದು ತುಂಬಾ ಸಂತೋಷವಾಗಿದೆ. ಬೆಂಗಳೂರು ಜನತೆಗೆ ಕುಡಿಯುವ ನೀರನ್ನು ಒದಗಿಸುವಲ್ಲಿ ಬೆಂಗಳೂರು ಜಲಮಂಡಳಿಯ ಕಾರ್ಯವು ಶ್ಲಾಘನೀಯ. ತಿಪ್ಪಗೊಂಡನಹಳ್ಳಿ ಜಲಾಶಯವು ಮೊದಲು ಬೆಂಗಳೂರಿಗೆ ಜಲಮೂಲವಾಗಿದ್ದು, ಈಗ ಕಲುಷಿತಗೊಂಡಿದೆ. ಈ ಜಲಾಶಯದ ಪುನಃಶ್ಚೇತನಗೊಳಿಸುವ ಮಹತ್ವದ ಕಾರ್ಯಕ್ಕೆ ಇಂದು ಶಂಕುಸ್ಥಾಪನೆ ಮಾಡುತ್ತಿರುವುದು ಬಹಳ ಸಂತೋಷವಾಗಿದೆ ಹಾಗೂ ಬೆಂಗಳೂರು ಜಲಮಂಡಳಿಯ ಅಧ್ಯಕ್ಷರಾದ ಶ್ರೀ ತುಷಾರ್ ಗಿರಿ ನಾಥ್ ರವರು ಹಾಗೂ ಅಧಿಕಾರಿ/ನೌಕರರ ಕಾರ್ಯ ತುಂಬಾ ಶ್ಲಾಘನೀಯ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಮಾರಂಭದಲ್ಲಿ ಶ್ರೀ ಮುನಿರತ್ನ, ಮಾನ್ಯ ಅಧ್ಯಕ್ಷರು, ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ, ಶ್ರೀ ಪಿ.ಆರ್. ರಮೇಶ್, ಮಾನ್ಯ ವಿಧಾನ ಪರಿಷತ್ ಸದಸ್ಯರು, ಶ್ರೀ ಅ.ದೇವೇಗೌಡ, ಮಾನ್ಯ ವಿಧಾನ ಪರಿಷತ್ ಸದಸ್ಯರು, ಬೆಂಗಳೂರು ಜಲಮಂಡಳಿಯ ಅಧ್ಯಕ್ಷರಾದ ಶ್ರೀ ತುಷಾರ್ ಗಿರಿ ನಾಥ್ ಭಾ.ಆ.ಸೇ ಶ್ರೀ ಸಿ.ಮುನಿರಾಜು, ಮಾನ್ಯ ಅಧ್ಯಕ್ಷರು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ಶ್ರೀ ಡಿ.ಹನುಮಂತಯ್ಯ, ಸದಸ್ಯರು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ಶ್ರೀಮತಿ ನಾಗವೇಣಿ ರಾಮಚಂದ್ರೇಗೌಡ, ಸದಸ್ಯರು, ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯತ್, ಶ್ರೀ ಮೋಹನ್ ಕುಮಾರ್, ಬಿ.ಬಿ.ಎಂ.ಪಿ ಸದಸ್ಯರು, ಶ್ರೀ ಎಸ್.ವಿ ರಮೇಶ್ ಮುಖ್ಯ ಅಭಿಯಂತರರು (ಕಾವೇರಿ), ಶ್ರೀ ಕೃಷ್ಣಗೌಡ ತಾಯಣ್ಣವರ್, ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ, ಬೆಂಗಳೂರು ಮಂಡಳಿಯ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ರುದ್ರೇಗೌಡರವರು ಹಾಗೂ ಪದಾಧಿಕಾರಿಗಳು ಹಾಗೂ ಶ್ರೀ ಗಂಗಾದ್ರಿ, ಅಧ್ಯಕ್ಷರು, ಬೆಂಗಳೂರು ಜಲಮಂಡಳಿ ಸ್ಯಾನಿಟರಿ ವರ್ಕ್‌ರ್ಸ್ ಯೂನಿಯನ್ ಮತ್ತು ಮಂಡಳಿಯ ಎಲ್ಲಾ ಹಿರಿಯ/ಕಿರಿಯ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಳೆದ ಸುಮಾರು 1895ನೇ ವರ್ಷದಿಂದ ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಹೆಸರಘಟ್ಟ ಜಲಾಶಯದಿಂದ ಪೂರೈಕೆ ಮಾಡಲಾಗುತ್ತಿತ್ತು. ಸುಮಾರು 1925 ರ ಹೊತ್ತಿಗೆ ಹೆಸರಘಟ್ಟ ಕೆರೆಯ ನೀರು ಬತ್ತಲು ಪ್ರಾರಂಭಿಸಿದಾಗ ಆಗಿನ ಮೈಸೂರು ಸರ್ಕಾರವು 1930 ರಲ್ಲಿ ಅರ್ಕಾವತಿ ಹಾಗೂ ಕುಮುದಾವತಿಯ ಸಂಗಮ ಪ್ರದೇಶದಲ್ಲಿ ನದಿಗೆ ಅಡ್ಡಲಾಗಿ ತಿಪ್ಪಗೊಂಡನಹಳಿಯಲ್ಲಿ ಜಲಾಶಯವನ್ನು ನಿರ್ಮಿಸಿ ಬೆಂಗಳೂರು

ಜನತೆಗೆ ಕುಡಿಯುವ ನೀರನ್ನು ಒದಗಿಸುವ ಮಹಾಯೋಜನೆಗೆ ಅಂತಿಮ ತೀರ್ಮಾನ ಕೈಗೊಂಡಿತು. ಈ ಕಾಮಗಾರಿಯ ಉಸ್ತುವಾರಿಯನ್ನು ದಿವಂಗತ ಭಾರತ ರತ್ನ ಪುರಸ್ಕೃತ ಖ್ಯಾತ ಅಭಿಯಂತರರಾದ ದಿವಾನ್ ಶ್ರೀ ಸರ್.ಎಂ. ವಿಶ್ವೇಶ್ವರಯ್ಯ ರವರು ವಹಿಸಿಕೊಂಡು 1933 ರ ಹೊತ್ತಿಗೆ ಪೂರ್ಣಗೊಳಿಸಿದರು. ಈ ಯೋಜನೆಯಲ್ಲಿ ತಿಪ್ಪಗೊಂಡನಹಳ್ಳಿಯಲ್ಲಿ ಡ್ಯಾಮ್ ನಿರ್ಮಿಸಿ, ಪಂಪಿನ ಮುಖಾಂತರ ನೀರನ್ನು ತಾವರೆಕೆರೆಗೆ ಲಿಫ್ಟ್ ಮಾಡಿ ಅಲ್ಲಿಂದ 2ನೇ ಹಂತದ ಪಂಪಿನ ಮುಖಾಂತರ ಮಲ್ಲೇಶ್ವರಂನ್ಲಲಿರುವ ಸಿಜೆಎಫ್ ಜಲಾಗಾರಕ್ಕೆ ನೀರನ್ನು ಪೂರೈಸಲಾಗುತ್ತಿತ್ತು.

ವಿವಿದ ಹಂತಗಳಲ್ಲಿ ಉನ್ನತೀಕರಣಗೊಳಿಸಿ 1970 ರ ಹೊತ್ತಿಗೆ ದಿನಂಪ್ರತಿ 135 ಮಿಲಿಯನ್ ಲೀಟರ್‌ನಷ್ಟು ನೀರನ್ನು ಸರಬರಾಜು ಮಾಡಲಾಗುತ್ತಿತ್ತು. ತದನಂತರ ಬೆಂಗಳೂರಿನ ಸುತ್ತಮುತ್ತಲಿನ ಹಾಗೂ ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದಲ್ಲಿನ ಕ್ಷಿಪ್ರಗತಿಯ ಅಭಿವೃದ್ಧಿಕಾರ್ಯ ಹಾಗೂ ನಗರದ ಬೆಳವಣಿಗೆಯಿಂದಾಗಿ ಜಲಾಶಯದ ನೀರಿನ ಒಳಹರಿವು ಹಾಗೂ ಗುಣಮಟ್ಟ ಕುಸಿತಗೊಂಡಿತು. ಈ ಮಧ್ಯೆ ಕಾವೇರಿ ವಿವಿಧ ಹಂತಗಳ ಯೋಜನೆಯಡಿಯಲ್ಲಿ ನೀರಿನ ಪೂರೈಕೆಯನ್ನು ಅನುಷ್ಠಾನಗೊಳಿಸುತ್ತಾ ಬಂದು ತಿಪ್ಪಗೊಂಡನಹಳ್ಳಿ ಕೆರೆಯ ನೀರಿನ ಅವಲಂಬನೆಯನ್ನು ಕಡಿಮೆಗೊಳಿಸಲಾಯಿತು ಮತ್ತು ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿನ ನೀರಿನ ಗುಣಮಟ್ಟದ ಕುಸಿತದ ಹಾಗೂ ಮಳೆ ನೀರಿನ ಸಂಗ್ರಹಣೆ ಕುಂಠಿತಗೊಂಡ ಹಿನ್ನಲೆಯಲ್ಲಿ ನೀರಿನ ಪೂರೈಕೆಯನ್ನು ಕಡಿತಗೊಳಿಸುತ್ತಾ ಬಂದು 2012 ರ ಹೊತ್ತಿಗೆ ನೀರಿನ ಪೂರೈಕೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ.

ತಿಪ್ಪಗೊಂಡನಹಳ್ಳಿ ಜಲಾಶಯದ ಒಟ್ಟು ಸಾಮರ್ಥ್ಯ 3345 ದಶಲಕ್ಷ ಘನ ಮೀಟರ್ (ಎಂಸಿಟಿಎಫ್) (3.34 ಟಿಎಂಸಿ) ಗಳಾಗಿದ್ದು, ಪ್ರಸ್ತುತ ಇದರಲ್ಲಿ ಸೇವನೆಗೆ ಯೋಗ್ಯವಲ್ಲದ ನೀರಿನ ಶೇಖರಣೆಯಾಗಿದ್ದು, ಇದರ ಪುನರುಜ್ಜೀವನ ಅತಿ ಅವಶ್ಯವಾಗಿರುತ್ತದೆ. ಎತ್ತಿನಹೊಳೆಯಿಂದ ಬೆಂಗಳೂರಿನ ನಗರದ ಪಾಲಾದ 0.8 ಟಿಎಂಸಿ ನೀರನ್ನು ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಹಾಗೂ 1.70 ಟಿಎಂಸಿ ನೀರನ್ನು ಹೆಸರಘಟ್ಟ ಜಲಾಶಯಕ್ಕೆ ಪೂರೈಸಲಾಗುವುದು. ಮೊದಲನೇ ಹಂತದಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ನೀರು ಒದಗಿಸುವ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯಿಂದ ತ್ವರಿತಗತಿಯಲ್ಲಿ ನಡೆಯುತ್ತಿದೆ. ಈ ನೀರನ್ನು ಉಪಯೋಗಿಸುವ ಸಲುವಾಗಿ ತಿಪ್ಪಗೊಂಡನಹಳ್ಳಿ ಮತ್ತು ಹೆಸರಘಟ್ಟ ಜಲಾಶಯದ ಹಾಗೂ ಜಲಶುದ್ಧೀಕರಣ ಘಟಕಗಳ ಪುನ:ಶ್ಚೇತನ ಕಾರ್ಯವು ಅತಿ ಅವಶ್ಯವಾಗಿರುತ್ತದೆ. ಈ ಸಂಬಂಧ ಡಿ.ಪಿ.ಆರ್.ನ್ನು ರೂ.406.00 ಕೋಟಿಗಳಿಗೆ ತಯಾರಿಸಿ ಸರ್ಕಾರದ ಅನುಮೋದನೆಗಾಗಿ 2018 ರಲ್ಲಿ ಸಲ್ಲಿಸಲಾಗಿತ್ತು. ಸರ್ಕಾರವು ಎತ್ತಿನಹೊಳೆ ನೀರಿನ ಯೋಜನೆಯಿಂದ ಪ್ರಥಮವಾಗಿ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಹರಿದು ಬರುವುದರಿಂದ ತಿಪ್ಪಗೊಂಡನಹಳ್ಳಿ ಜಲಾಶಯದ ಪುನ:ಶ್ಚೇತನ ಕಾಮಗಾರಿಗಳಿಗೆ ಮೊದಲನೆ ಹಂತದಲ್ಲಿ ರೂ.285.95ಕೋಟಿಗಳಿಗೆ ಆಡಳಿತಾತ್ಮಕ

ಅನುಮೋದನೆಯನ್ನು ನೀಡಿ Megacity Revolving Fund ಅನ್ವಯ KUIDFC ಯಿಂದ 50% ಅಂದರೆ ರೂ.143.00 ಕೋಟಿ ಸಾಲದ ರೂಪದಲ್ಲಿ ಹಾಗೂ 25% ಅಂದ್ರೆ ರೂ. 71.5 ಕೋಟಿ ರಾಜ್ಯ ಸರ್ಕಾರದ ಅನುದಾನದೊಂದಿಗೆ ಉಳಿದ 25% ಅಂದ್ರೆ ರೂ. 71.5 ಕೋಟಿ ಬೆಂಗಳೂರು ಜಲಮಂಡಲಿಯ ಸ್ವಂತ ವೆಚ್ಚದಲ್ಲಿ ಕೈಗೊಳ್ಳಲು ನಿರ್ದೇಶಿಸಿದೆ.

ಈ ಸಂಬಂಧ ರೂ.260.34 ಕೋಟಿಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮಗಳ ಪ್ರಕಾರ ಟೆಂಡರನ್ನು ಡಿಸೆಂಬರ್ 2018 ರಲ್ಲಿ ಕರೆಯಲಾಯಿತು. ಈ ಕಾಮಗಾರಿಗಳ ಅಡಿಯಲ್ಲಿ ಕೈಗೊಂಡಿರುವ 4 ಕಾಮಗಾರಿಗಳು ಈ ಕೆಳಗಿನಂತಿವೆ.

1. 20 ಎಂಎಲ್‌ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕ (STP) ಹಾಗೂ Terminal Sewage Pumping System (TSPS) ಅನ್ನು ತಿಪ್ಪಗೊಂಡನಹಳ್ಳಿ ಜಲಾಶಯದ ಬಳಿ ನಿರ್ಮಿಸುವುದು.
   ಇದು ಅರ್ಕಾವತಿ ನದಿಗೆ ಹರಿದು ಸೇರುವಂತಹ ತ್ಯಾಜ್ಯ ನೀರನ್ನು ಶುದ್ಧೀಕರಿಸುವುದಲ್ಲದೆ ಎತ್ತಿನಹೊಳೆ ನದಿಯ ಶುದ್ಧ ನೀರಿನ ಜೊತೆ ಕೊಳಚೆ ನೀರು ಸೇರ್ಪಡೆಯಾಗುವುದನ್ನು ತಡೆಯುವುದು.
2. 110ಎಂಎಲ್‌ಡಿ ಸಾಮರ್ಥ್ಯದ ಅತ್ಯಂತ ಉನ್ನತ ತಂತ್ರಜ್ಞಾನದ ನೀರು ಶುದ್ಧೀಕರಣ ಘಟಕದ ಸ್ಥಾಪನೆಮಾಡುವುದು. ಈಗಿರುವ ಒಟ್ಟು 4 ಹಳೆಯದಾದ ನೀರು ಶುದ್ಧೀಕರಣ ಘಟಕಗಳಲ್ಲಿ 3 ಘಟಕಗಳನ್ನು ಸಂಪೂರ್ಣವಾಗಿ ತೆರವುಗೊಳಿಸಿ ಓಝೋನ್ ಬಳಕೆಯ ಅತ್ಯಂತ ಉನ್ನತ ತಂತ್ರಜ್ಞಾನವನ್ನು ಅಳವಡಿಸಿ 110 ಎಂಎಲ್‌ಡಿ ಸಾಮರ್ಥ್ಯದ ನೀರು ಶುದ್ಧೀಕರಣ ಘಟಕವನ್ನು ಸ್ಥಾಪಿಸುವುದು.
3. ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿರುವ ಪಂಪ್ ಹೌಸ್‌ಗಳನ್ನು ಹಾಗೂ ತಾವರೇಕೆರೆ ಪಂಪ್‌ಹೌಸ್‌ಗಳನ್ನು ಸಂಪೂರ್ಣವಾಗಿ ಪುನ:ಶ್ಚೇತನಗೊಳಿಸಿ ಸುಮಾರು 22 ಕಿಮೀ ಗಳಷ್ಟು ಉದ್ದದ ಹೊಸ ಉಕ್ಕಿನ ಕೊಳವೆ ಮಾರ್ಗವನ್ನು ಬೆಂಗಳೂರಿನವರೆಗೆ ಜೋಡಣೆ ಮಾಡುವುದು.
4. ಈಗಿರುವ ತಿಪ್ಪಗೊಂಡನಹಳ್ಳಿ ಜಲಾಶಯದ ಹೂಳನ್ನು ಬಯೋ ರೆಮಿಡಿಯೇಷನ್ ವಿಧಾನದ ಮೂಲಕ ತೆಗೆದು ಜಲಾಶಯವನ್ನು ಹೊಸ ನೀರಿನ ಸೇರ್ಪಡಗೆ ಬೇಕಾದ ಎಲ್ಲಾ ಸೂಕ್ತ ವ್ಯವಸ್ಥೆ ಕಲ್ಪಿಸುವುದು.

ಟೆಂಡರ್ ಪ್ರಕ್ರಿಯೆಯ ಮುಖಾಂತರ M/s. Megha Engineering & Infrastructures Ltd., ರವರಿಗೆ ಘನ ಸರ್ಕಾರವು ಮೇಲಿನ ಕಾಮಗಾರಿಯನ್ನು ವಹಿಸಿಕೊಟ್ಟಿದೆ. ಈ ಮೇಲೆ ತಿಳಿಸಿದ 4 ಕಾಮಗಾರಿಗಳು 10 ವರ್ಷಗಳವರೆಗಿನ ನಿರ್ವಹಣೆ ಮತ್ತು ಚಾಲನೆಯ ಷರತ್ತಿಗೆ ಒಳಗೊಂಡಿರುತ್ತದೆ. ಈ ಎಲ್ಲಾ ಕಾಮಗಾರಿಗಳ ಉಸ್ತುವಾರಿಗೆ M/s TATA Consultant Engineers ರವರನ್ನು ಸಮಾಲೋಚಕರನ್ನಾಗಿ ಸಹ ನಿಯೋಜಿಸಲಾಗಿದೆ ಹಾಗೂ ಅವರ ಮೇಲುಸ್ತುವಾರಿಯಲ್ಲಿ ಈ ಯೋಜನೆಯನ್ನು ಮುಂದಿನ 30 ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸುವ ಗುರಿ ನಿಗಧಿಪಡಿಸಲಾಗಿರುತ್ತದೆ ಮತ್ತು 2021 ರ ಹೊತ್ತಿಗೆ ಈ ಕಾಮಗಾರಿಯು ಮುಕ್ತಾಯಗೊಳ್ಳಲಿದೆ. ಈ ಕಾಮಗಾರಿಯ ಶಂಕುಸ್ಥಾಪನೆಯನ್ನು ಇಂದು ನೆರವೇರಿಸಲಾಗುತ್ತಿದೆ.

ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ಬೆಂಗಳೂರು ಮಹಾ ನಗರಕ್ಕೆ ಅದರಲ್ಲೂ ಮುಖ್ಯವಾಗಿ ಪಶ್ಚಿಮ ಹಾಗೂ ಉತ್ತರ ಪಶ್ಚಿಮ ವಿಭಾಗಗಳಿಗೆ ಈ ಯೋಜನೆಯಿಂದ ಕುಡಿಯುವ ನೀರನ್ನು ಒದಗಿಸುವ ಸರ್ಕಾರದ ಮಹತ್ವಾಕಾಂಕ್ಷಿ ಕಾಯಕಲ್ಪ ಯೋಜನೆ ಇದಾಗಿರುತ್ತದೆ.

ಬೆಂಗಳೂರಿನ ಸುಮಾರು 10 ಲಕ್ಷ ಮಹಾ ಜನತೆಗೆ ದಿನನಿತ್ಯದ ನೀರಿನ ದಾಹವನ್ನು ಅದರಲ್ಲಿಯೂ ಯಶವಂತಪುರ, ಮಲ್ಲೇಶ್ವರ, ವಿಜಯನಗರ ಹಾಗೂ ಯಲಹಂಕ ವಿಭಾಗಗಳ ಜನರ ನೀರಿನ ಬೇಡಿಕೆಯನ್ನು ಈ ಯೋಜನೆಯು ನೀಗಿಸುತ್ತದೆ.

ಪ್ರಸ್ತುತ ಬೆಂಗಳೂರು ಜಲಮಂಡಳಿಯು ದಿನನಿತ್ಯ 1400 ದಶ ಲಕ್ಷ ಲೀಟರ್ ನೀರನ್ನು ಬೆಂಗಳೂರು ನಗರಕ್ಕೆ ಪೂರೈಸುತ್ತಿದೆ. ಈ ಮಹಾತ್ವಾಕಾಂಕ್ಷಿ ಯೋಜನೆಯಿಂದ ಹೆಚ್ಚುವರಿ ದಿನನಿತ್ಯ 110 ದಶ ಲಕ್ಷ ಲೀಟರ್ ನೀರು ಪೂರೈಕೆಯಾಗಿ, ಒಟ್ಟಾರೆ ದಿನನಿತ್ಯ 1510 ದಶ ಲಕ್ಷ ಲೀಟರ್ ನೀರು ಪೂರೈಕೆಯಾಗಲಿದೆ ಹಾಗೂ ಬೆಂಗಳೂರಿನಲ್ಲಿ ಪ್ರತಿ ದಿನ ಪ್ರತಿ ನಾಗರೀಕರಿಗೆ ಸುಮಾರು 100 ಲೀಟರ್‌ನಷ್ಟು ಅಂದಾಜು ನೀರನ್ನು (More than 100 LPCD) ಒದಗಿಸುವ ಸೌಲಭ್ಯ ಇದಾಗಿದೆ. ಈ ಮೂಲಕ ಬೆಂಗಳೂರು ಮಹಾನಗರದ ನೀರಿನ ಬೇಡಿಕೆಯ ಅನುಸಾರ ಸಮರ್ಪಕ ಪೂರೈಕೆಯ ಅನುಷ್ಠಾನದ ಕನಸು ಸಾಕಾರವಾಗಲಿದೆ.

## ಬೆಂಗಳೂರು ಜಲಮಂಡಲಿ: ಮಾರ್ಚ್ 08 ರಂದು ಸಕಾನಿಅ(ಪೂರ್ವ-2) ಉಪವಿಭಾಗದಲ್ಲಿ ನೀರಿನ ಅದಾಲತ್

ಬೆಂಗಳೂರು ಜಲಮಂಡಲಿಯ ಸಕಾನಿಅ(ಪೂರ್ವ-2) ಉಪವಿಭಾಗದಲ್ಲಿ ಶುಕ್ರವಾರ ದಿನಾಂಕ:08.03.2019 ರಂದು ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆಗೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ನೀರಿನ ಅದಾಲತ್‌ಅನ್ನು ಬೆಳಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸಲಾಗುತ್ತದೆ.

ಅಂದು ನೀರಿನ ಅದಾಲತ್ ನಲ್ಲಿ ಸಕಾನಿಅ(ಪೂರ್ವ-2) ಉಪವಿಭಾಗ ವ್ಯಾಪ್ತಿಯ ಎ.ಇ.ಸಿ.ಎಸ್. ಲೇಔಟ್, ಹೂಡಿ, ಭುವನೇಶ್ವರಿನಗರ ಸೇವಾ ಠಾಣೆ ವ್ಯಾಪ್ತಿಯ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ಬಿ.ಇ.ಎಂ.ಎಲ್ ಲೇಔಟ್, ಐ.ಟಿ.ಪಿ.ಎಲ್, ಕುಂದಲಹಳ್ಳಿ ಮುಖ್ಯ ರಸ್ತೆ ಹತ್ತಿರ. ಇಲ್ಲಿನ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಪೂರ್ವ-2) ಕಚೇರಿಯಲ್ಲಿ ಪರಿಶೀಲಿಸಿ ಬಗೆಹರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: ಕಾರ್ಯ ನಿರ್ವಾಹಕ ಅಭಿಯಂತರರು (ಪೂರ್ವ): 22945158. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಪೂರ್ವ-2) ಉಪವಿಭಾಗ: 22945115.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ: 22238888, ಸಹಾಯವಾಣಿ 1916 ಹಾಗೂ ವಾಟ್ಸ್ಆಪ್ ಸಂಖ್ಯೆ: 8762228888 ಗೆ ಸಂಪರ್ಕಿಸಬಹುದಾಗಿದೆ.

ಸಾರ್ವಜನಿಕರು ಮೇಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ನೀರಿನ ಅದಾಲತ್ ಸೌಲಭ್ಯವನ್ನು ಬಳಸಿಕೊಳ್ಳ ಬಹುದಾಗಿದೆ.

## BWSSB: Water Adalat in AEE(East-2) sub division on March 8th

BWSSB water Adalat is held on 08.03.2019 in AEE(East-2) sub division from 9:30.am to 11.00 am to settle the grievances concerned with the water billing, delay in providing water supply & sanitary connections, delay in converting from domestic connection to non domestic connection & other related issues.

The disputes of consumers of AECS Layout, Hoodi, Bhuvaneshwari Nagar service station coming under AEE(East-2) sub division, will be discussed in detail & problems will be settled in the office of the Assistant Executive Engineer (East-2) sub division, BEML Layout, Near ITPL Kundalahalli Main Road.

Details regarding the adalat can be obtained by the office of EE(East): 22945158, or office of AEE (East-2): 22945115.

For any problems regarding the water supply and other issues publics can contact 24x7 on Call centre: 22238888 helpline number: 1916 & whats app no: 8762228888.

Public can utilize this adalat facilities to solve the problems regarding water supply.